ಮಾರ್ಚ್/ಏಪ್ರಿಲ್ 2025 ರ ಪರೀಕ್ಷೆ-1

**MARCH/APRIL 2025 EXAMINATION-1**

**A**

**CCE RF/RR/ PF/PR**

[ ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 8

[ Total No. of Printed Pages : 8

[ ಒಟ್ಟು ಪ್ರಶ್ನೆಗಳ ಸಂಖ್ಯೆ : 25

[ Total No. of Questions : 25

**ಸಂಕೇತ ಸಂಖ್ಯೆ : 29-K** **Code No. : 29-K**

# ವಿಷಯ : ಕರ್ನಾಟಕ ಸಂಗೀತ — ಶಾಸ್ತ್ರ ವಿಭಾಗ

# Subject : CARNATIC MUSIC — THEORY

**(ಕನ್ನಡ ಮಾಧ್ಯಮ / Kannada Medium)**

**(ಶಾಲಾ ಅಭ್ಯರ್ಥಿ / ಶಾಲಾ ಪುನರಾವರ್ತಿತ ಅಭ್ಯರ್ಥಿ / ಖಾಸಗಿ ಅಭ್ಯರ್ಥಿ / ಖಾಸಗಿ ಪುನರಾವರ್ತಿತ ಅಭ್ಯರ್ಥಿ)**

**(Regular Fresh / Regular Repeater / Private Fresh / Private Repeater)**

ದಿನಾಂಕ : 02. 04. 2025 ] [ Date : 02. 04. 2025

ಸಮಯ : ಮಧ್ಯಾಹ್ನ 2-00 ರಿಂದ ಸಂಜೆ 3-45 ರವರೆಗೆ ] [ Time : 2-00 P.M. to 3-45 P.M.

ಗರಿಷ್ಠ ಅಂಕಗಳು : 40 ] [ Max. Marks : 40

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

**Cut here/ಇಲ್ಲಿ ಕತ್ತರಿಸಿ**

1. ಈ ಪ್ರಶ್ನೆಪತ್ರಿಕೆಯು ಒಟ್ಟು 25 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ***ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ (ಬಾಣದ ಗುರುತನ್ನು ಅನುಸರಿಸಿ).*** ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ಸೂಚಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವೂ ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.
6. ನಿಮಗೆ ವಿತರಿಸಲಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ( Version ) ಮತ್ತು ನಿಮ್ಮ ಪ್ರವೇಶ ಪತ್ರದಲ್ಲಿ ಮುದ್ರಿತವಾಗಿರುವ ಪ್ರಶ್ನೆಪತ್ರಿಕೆಯ ಆವೃತ್ತಿ ಇವೆರಡೂ ಒಂದೇ ಆಗಿರುವುದನ್ನು ಖಾತರಿಪಡಿಸಿಕೊಳ್ಳಿ.

29-K

ಇಲ್ಲಿಂದ ಕತ್ತರಿಸಿ

**TEAR HERE TO OPEN THE QUESTION PAPER**

ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ

**Tear here**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಡನೆ ಪೂರ್ಣ ಉತ್ತರವನ್ನು ಬರೆಯಿರಿ :** **8 × 1 = 8**

1. ಸಂಗೀತದ ಮೂಲ

   (A) ಋಗ್ವೇದ

   (B) ಯಜುರ್ವೇದ

   (C) ಸಾಮವೇದ

   (D) ಅಥರ್ವಣವೇದ

2. ಕರ್ನಾಟಕ ಸಂಗೀತದಲ್ಲಿ ಒಂದು ಸ್ಥಾಯಿಯಲ್ಲಿ ಬರುವ ಸ್ವರಗಳ ಸಂಖ್ಯೆ

   (A) ಎಂಟು

   (B) ಹದಿನಾರು

   (C) ಹನ್ನೆರಡು

   (D) ಇಪ್ಪತ್ತೆರಡು

3. ಸರಳೆ ವರಸೆಗಳನ್ನು ಹಾಡುವ ರಾಗ

(A) ಮಾಯಾಮಾಳವಗೌಳ

(B) ಮಲಹರಿ

(C) ಮೋಹನ

(D) ಮಧ್ಯಮಾವತಿ

4. ಧೀರಶಂಕರಾಭರಣ ಮತ್ತು ಮೇಚಕಲ್ಯಾಣಿ ರಾಗಗಳ ನಡುವಿನ ವ್ಯತ್ಯಾಸವನ್ನು ಸೂಚಿಸುವ ಸ್ವರ

(A) ರಿಷಭ

(B) ಗಾಂಧಾರ

(C) ನಿಷಾದ

(D) ಮಧ್ಯಮ

5. ಸುಳಾದಿ ಸಪ್ತ ತಾಳಗಳಲ್ಲಿ ಬರುವ ತ್ರಿಪುಟತಾಳದ ಒಂದು ಆವರ್ತಕ್ಕೆ ಏಳು ಅಕ್ಷರಗಳು ಬರುತ್ತವೆ. ಏಕೆಂದರೆ ಈ ತಾಳದ ಲಘುವಿನ ಜಾತಿ ;

   (A) ತಿಶ್ರ

   (B) ಚತುರಶ್ರ

   (C) ಖಂಡ

   (D) ಮಿಶ್ರ

6. ಲಕ್ಷಣಗೀತೆಯನ್ನು ಆ ಹೆಸರಿನಿಂದ ಕರೆಯಲು ಕಾರಣವೇನೆಂದರೆ, ಈ ಗೀತೆಯ ಸಾಹಿತ್ಯವು

   (A) ಸಪ್ತತಾಳಗಳಲ್ಲಿ ರಚಿತವಾಗಿದೆ

   (B) ರಾಗಲಕ್ಷಣವನ್ನು ಸೂಚಿಸುತ್ತದೆ

   (C) ವಾಗ್ಗೇಯಕಾರರ ಅಂಕಿತವನ್ನು ಸೂಚಿಸುತ್ತದೆ

   (D) ಸಂಗೀತದ ಪ್ರಕಾರವನ್ನು ಸೂಚಿಸುತ್ತದೆ

7. ಕನಕದಾಸರ ಜನ್ಮಸ್ಥಳ

   (A) ಬಾಗೇವಾಡಿ

   (B) ಬೆಳ್ಳೂರು

   (C) ಬಾಳೆ ಹೊನ್ನೂರು

   (D) ಬಾಡ

8. ನಾದಸ್ವರವು ಗಾಳಿಯಿಂದ ನುಡಿಯುವುದರಿಂದ ಈ ವಾದ್ಯವನ್ನು

   (A) ತತ ವಾದ್ಯವೆನ್ನುವರು

   (B) ಸುಷಿರ ವಾದ್ಯವೆನ್ನುವರು

   (C) ಮಂಗಳ ವಾದ್ಯವೆನ್ನುವರು

   (D) ಜಾನಪದ ವಾದ್ಯವೆನ್ನುವರು

**II. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ :** **8 × 1 = 8**

9. ಸಂಗೀತವು ಗಣಿತಶಾಸ್ತ್ರದೊಂದಿಗೆ ಸಂಬಂಧ ಹೊಂದಿರಲು ಕಾರಣವೇನು ?

10. ಹಿಂದೂಸ್ತಾನಿ ಸಂಗೀತ ಪದ್ಧತಿಯಲ್ಲಿ ಮೋಹನ ರಾಗವನ್ನು ಏನೆಂದು ಕರೆಯುತ್ತಾರೆ ?

11. ಆಧಾರ ಶ್ರುತಿಯನ್ನು ಸೂಚಿಸುವ ಸ್ವರ ಯಾವುದು ?

12. ಷಾಡವ ರಾಗದ ಆರೋಹಣ ಮತ್ತು ಅವರೋಹಣಗಳಲ್ಲಿ ಬರುವ ಸ್ವರಗಳ ಸಂಖ್ಯೆ ಎಷ್ಟು ?

13. ದ್ರುತದಿಂದ ಪ್ರಾರಂಭವಾಗುವ ತಾಳ ಯಾವುದು ?

14. ಸರಳೆ ಮತ್ತು ಜಂಟಿ ವರಸೆಗಳ ನಡುವಿನ ಒಂದು ವ್ಯತ್ಯಾಸವನ್ನು ಬರೆಯಿರಿ.

15. ಬಸವಣ್ಣನವರು ತಮ್ಮ ವಚನಗಳಲ್ಲಿ 'ಕೂಡಲಸಂಗಮದೇವ' ಎಂಬ ಅಂಕಿತವನ್ನು ಬಳಸಲು ಕಾರಣವೇನು ?

16. ಮೋರ್ಚಿಂಗ್ ವಾದ್ಯವನ್ನು ಘನವಾದ್ಯವೆಂದು ಕರೆಯಲು ಕಾರಣವೇನು ?

**III. ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ಮೂರು ವಾಕ್ಯಗಳಲ್ಲಿ ಉತ್ತರಿಸಿ : 7 × 2 = 14**

17. ಸಂಗೀತವು ಭೌತಶಾಸ್ತ್ರದೊಂದಿಗೆ ನಿಕಟ ಸಂಬಂಧವನ್ನು ಹೊಂದಿರಲು ಕಾರಣವೇನು ?

18. ಪಿಳ್ಳಾರಿಗೀತೆ ಮತ್ತು ಸಂಚಾರಿ ಗೀತೆಗಳ ನಡುವಿನ ಒಂದು ವ್ಯತ್ಯಾಸವನ್ನು ಬರೆಯಿರಿ.

19. ಔಡವ ಮತ್ತು ವಕ್ರರಾಗಗಳ ನಡುವಿನ ಒಂದು ವ್ಯತ್ಯಾಸವನ್ನು ಒಂದೊಂದು ಉದಾಹರಣೆಯೊಂದಿಗೆ ಬರೆಯಿರಿ.

20. ಏಕತಾಳ ಮತ್ತು ಝುಂಪೆತಾಳಗಳ ನಡುವಿನ ಒಂದು ವ್ಯತ್ಯಾಸವನ್ನು ಬರೆಯಿರಿ.

21. ಸಂಗೀತವು ಮನೋವಿಜ್ಞಾನದೊಂದಿಗೆ ಹೇಗೆ ಸಂಬಂಧವನ್ನು ಹೊಂದಿದೆ ಎಂಬುದನ್ನು ಸಂಕ್ಷಿಪ್ತವಾಗಿ ವಿವರಿಸಿ.

22. ಈ ಕೆಳಗಿನ ಸಂಗೀತ ವಾದ್ಯಗಳನ್ನು ಕರ್ನಾಟಕ ಮತ್ತು ಹಿಂದೂಸ್ಥಾನಿ ವಾದ್ಯಗಳಾಗಿ ವರ್ಗೀಕರಿಸಿ ಬರೆಯಿರಿ :

    ಸಿತಾರ್, ವೀಣೆ, ಮೃದಂಗ, ಶಹನಾಯ್, ಪಕವಾಜ್, ಘಟಂ, ಸಾರಂಗಿ, ಪಿಟೀಲು.

23. ಈ ಕೆಳಗಿನ ರಚನೆಗಳನ್ನು ಅಭ್ಯಾಸಗಾನ ಹಾಗೂ ಸಭಾಗಾನ ರಚನೆಗಳಾಗಿ ವರ್ಗೀಕರಿಸಿ ಬರೆಯಿರಿ :

    ಸರಳೆ ವರಸೆ, ವರ್ಣ, ಕೀರ್ತನೆ, ಅಲಂಕಾರ, ದಾಟುವರಸೆ, ಕೃತಿ, ತಾರಸ್ಥಾಯಿ ವರಸೆ, ವಚನ.

**IV. ಕೆಳಗಿನ ಪ್ರಶ್ನೆಗಳಿಗೆ ಸಂಕ್ಷಿಪ್ತವಾಗಿ ಉತ್ತರಿಸಿ :**

24. ಶ್ರೀ ತ್ಯಾಗರಾಜರ ಜೀವನ ಚರಿತ್ರೆಯನ್ನು ಸಂಕ್ಷಿಪ್ತವಾಗಿ ವಿವರಿಸಿ. **1 × 6 = 6**

25. ಚತುರಶ್ರಜಾತಿ ರೂಪಕತಾಳದ ಸ್ವರಾಲಂಕಾರವನ್ನು ಸ್ವರಲಿಪಿಯೊಂದಿಗೆ ವಿನ್ಯಾಸಗೊಳಿಸಿ ಬರೆಯಿರಿ. **1 × 4 = 4**

DO NOT WRITE ANYTHING HERE